ಇ) ಹಾಗಿದ್ದಲ್ಲಿ ಸರ್ಕಾರದ ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಬೆಂಗಳೂರು ಮಹಾನಗರ ಪಾಲಿಕೆಯು ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿರುತ್ತದೆ. ಹಾಗೂ ರೈಲ್ವೆ ಅಂಡರ್ ಬ್ರಿಡ್ಜ್ ಮತ್ತು ಓವರ್ ಬ್ರಿಡ್ಜ್ ಕಟ್ಟುವ ಬಗ್ಗೆ ಯೋಜನೆ ತಯಾರಿಸಲು ಮೆ॥ ರೈಲ್ ಇಂಡಿಯಾ ಟೆಕ್ನಿಕಲ್ ಎಕನಾಮಿಕಲ್ ಸರ್ವೀಸಸ್ (ರೈಟ್ಸ್) ಇವರನ್ನು ಸಲಹೆಗಾರರನ್ನಾಗಿ ನೇಮಿಸಲಾಗಿರುತ್ತದೆ. ಇವರು ನಕ್ಷೆ ಮತ್ತು ವಿನ್ಯಾಸಗಳನ್ನು ತಯಾರಿಸಿರುತ್ತಾರೆ.

ಇ) ಮೆ॥ ರೈಲ್ ಇಂಡಿಯಾ ಟೆಕ್ನಿಕಲ್ ಎಕನಾಮಿಕಲ್ ಸರ್ವೀಸಸ್ (ರೈಟ್ಸ್) ಇವರು ನಕ್ಷೆಮತ್ತು ವಿನ್ಯಾಸದ ವಿವರಗಳನ್ನು ಒದಗಿಸಿದ ನಂತರ, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೈಲ್ವೆ ಇಲಾಖೆಯವರನ್ನು ಕೋರಲಾಗುವುದು.

ಅಥಣಿ ತಾಲ್ಲೂಕಿನಲ್ಲಿ ಹೊಸ ಲೈಸನ್ಸ್‌ಗಳಿಗೆ ಬಂದ ಅರ್ಜಿಗಳ ಸಂಖ್ಯೆ

1394 (1709) ಶ್ರೀ ಡೊಂಗರಾವ್ ಷಹಜಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕಿನಲ್ಲಿ ಸಿಎಲ್-2, ಸಿಎಲ್ -9 ಹೊಸ ಲೈಸೆನ್ಸ್‌ಗಳಿಗಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಈ ಅರ್ಜಿಗಳು ಈಗ ಯಾವ ಹಂತದಲ್ಲಿವೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ)

ಸನ್ನದ್ದು	ಬಂದ ಅರ್ಜಿಗಳ ಸಂಖ್ಯೆ
ಸಿಎಲ್-2	1
ಸಿಎಲ್-9	-

ಆ) ಅರ್ಜಿಯು ಪರಿಶೀಲನಾ ಹಂತದಲ್ಲಿದೆ.

ಅಥಣಿ ತಾಲ್ಲೂಕಿನಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ

1395 (1710) ಶ್ರೀ ಡೊಂಗರಾವ್ ಷಹಜಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಇಂಧನ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕಿನಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಲು ರೈತರಿಂದ ಅಂದಾಜು ವೆಚ್ಚದ ಹಣವನ್ನು ತುಂಬಿಸಿ ಕೊಂಡು ಅವರಿಗೆ ವಿದ್ಯುತ್ ಪೂರೈಕೆ ಮಾಡದೇ ಸ್ಥಗಿತಗೊಂಡಿರುವ ಪ್ರಕರಣಗಳೆಷ್ಟು ಹಾಗೂ ಇವುಗಳಿಗೆ ಪೂರೈಸಲು ಯಾವ ಕ್ರಮ ಕೈ ಕೊಳ್ಳಲಾಗುವುದು;

ಆ) ಉಪ ವಿಭಾಗದಲ್ಲಿದ್ದ ಉಗ್ರಾಣವನ್ನು ವಿಭಾಗೀಯ ಕಛೇರಿಗೆ ಸ್ಥಳಾಂತರಿಸುವುದರಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಅನೇಕ ಚಿಕ್ಕ ಚಿಕ್ಕ ರೈತರು ಸಂಘಗಳ ಮುಖಾಂತರ ಸಾಮೂಹಿಕವಾಗಿ ಏತ ನೀರಾವರಿಗಾಗಿ ಮಂಜೂರಾತಿ ಪಡೆದಿರುವ 10 ಹೆಚ್.ಪಿ. ಗಿಂತ ಹೆಚ್ಚಿರುವ ಪಂಪ್‌ಸೆಟ್‌ಗಳಿಗೆ ಮೀಟರ್ ಮುಖಾಂತರ ಹೆಚ್ಚು ಬಿಲ್ಲನ್ನು ಅನುಕರಣೆ ಮಾಡುತ್ತಿದ್ದು ಹಾಗೂ ದೊಡ್ಡ ರೈತರು ವೈಯಕ್ತಿಕವಾಗಿ ಹೊಂದಿರುವ 10 ಹೆಚ್.ಪಿ. ಪಂಪ್‌ಸೆಟ್‌ಗಳ ಮೇಲೆ ಮೀಟರ್ ಅಳವಡಿಕೆ ಇಲ್ಲದೇ, ಬಿಲ್ಲನ್ನು ಪಡೆಯುವುದು, ಇದು ಅನ್ಯಾಯದ ನೀತಿ ಅಲ್ಲವೇ, ಈ ವಿಷಯಸರ್ಕಾರವು ಪುನರ್ ಪರಿಶೀಲಿಸುವುದೇ ?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಅಥಣಿ ತಾಲ್ಲೂಕಿನಲ್ಲಿ 157 ನೀರಾವರಿ ಪಂಪು ಸೆಟ್ಟುಗಳ ಅರ್ಜಿದಾರರಿಗೆ ವಿದ್ಯುತ್ ಪೂರೈಸಲು ಅಂದಾಜು ವೆಚ್ಚದ ಹಣವನ್ನು 'ಸ್ವಯಂ ಆರ್ಥಿಕ ನೆರವಿನ ಯೋಜನೆ' ಯಡಿ ತುಂಬಿಸಿಕೊಳ್ಳಲಾಗಿದೆ. ವಿದ್ಯುದೀಕರಣದ ಕೆಲಸಗಳನ್ನು ಕೈ ಗೊಳ್ಳಬೇಕಾಗಿದೆ. ಪ್ರಸಕ್ತ ವರ್ಷವಾದ 2000- 2001ರಲ್ಲಿ ಈ ನೀರಾವರಿ ಪಂಪುಸೆಟ್ಟುಗಳ ಅರ್ಜಿದಾರರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ಹಿರಿತನದ ಪ್ರಕಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

(ಆ) ಮತ್ತು (ಇ) ನಿಗಮವು ರಾಜ್ಯದ್ಯಾಂತ ಉಪ ವಿಭಾಗೀಯ ಮಟ್ಟ ದಲ್ಲಿ ಎಲ್ಲಾ ಉಗ್ರಾಣಗಳನ್ನು ಅವುಗಳ ಸಂಬಂಧ ಪಟ್ಟ ವಿಭಾಗೀಯ ಉಗ್ರಾಣಗಳೊಂದಿಗೆ ವಿಲೀನಗೊಳಿಸಿದೆ. ನಿಗಮದ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಈ ಕ್ರಮದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಲಾಗಿದೆ. ಉಪ ವಿಭಾಗಗಳ ವ್ಯಾಪ್ತಿಯಲ್ಲೇ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಅವುಗಳ ಸಂಬಂಧಪಟ್ಟ ವಿಭಾಗೀಯ ಉಗ್ರಾಣಗಳಿಂದ ಪೂರೈಸಲಾಗುತ್ತಿದೆ. ನಿಗಮದ ಅಥಣಿ ಉಪ ವಿಭಾಗಕ್ಕೆ ಸಂಬಂಧಪಟ್ಟ ಘಟಪ್ರಭ ವಿಭಾಗದಲ್ಲೇ ಒಂದು ಉಗ್ರಾಣವಿದ್ದು, ಈ ಉಗ್ರಾಣದಿಂದ ಸದರಿ ಉಪ ವಿಭಾಗಕ್ಕೆ ಸಾಮಗ್ರಿಗಳನ್ನು ಪೂರೈಸಲಾಗುತ್ತಿದೆ. ಉಪ ವಿಭಾಗೀಯ ಮಟ್ಟದಲ್ಲಿ ಉಗ್ರಾಣಗಳನ್ನು ಅವುಗಳ ಸಂಬಂಧಪಟ್ಟ ವಿಭಾಗೀಯ ಉಗ್ರಾಣಗಳೊಂದಿಗೆವಿಲೀನಗೊಳಿಸುವ ನಿರ್ಧಾರವನ್ನು ಸಮಗ್ರರೀತಿಯಲ್ಲಿ ಪರಿಶೀಲಿಸಿದ ನಂತರವೇ ತೆಗೆದುಕೊಂಡಿರುವುದರಿಂದ ಹಾಗೂ ರಾಜ್ಯಾದ್ಯಂತ ಒಂದೇ ರೀತಿಯಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿರುವುದರಿಂದ ಅಥಣಿ ಉಪ ವಿಭಾಗದಲ್ಲಿ ಪುನಃ ಉಗ್ರಾಣವನ್ನು ಪ್ರಾರಂಭಿಸುವ ಉದ್ದೇಶ ಪ್ರಸ್ತುತ ನಿಗಮಕ್ಕೆ ಇರುವುದಿಲ್ಲ.

ಈ) ನೀರಾವರಿ ಪಂಪುಸೆಟ್‌ನ ಮಂಜೂರಾದ ಸಂಪರ್ಕಿತ ಲೋಡ್ 10 ಹೆಚ್.ಪಿ. ಗಿಂತ ಜಾಸ್ತಿ ಇದ್ದಲ್ಲಿ, ಅಂತಹ ನೀರಾವರಿ ಪಂಪ್‌ಸೆಟ್ಟುಗಳ ಸ್ಥಾವರಗಳಿಗೆ ಮೀಟರ್ ಜೋಡಣೆಯು ಕಡ್ಡಾಯವಾಗಿರುತ್ತದೆ. ಇದು ರೈತರು ಸಂಘಗಳ ಮುಖಾಂತರ ಸಾಮೂಹಿಕವಾಗಿ ಕೈಗೊಳ್ಳುವ ಏತ ನೀರಾವರಿ ಪಂಪ್‌ಸೆಟ್ಟುಗಳ ಮತ್ತು ವೈಯಕ್ತಿಕವಾಗಿ ನಡೆಸುವ ಪಂಪ್‌ಸೆಟ್ ಎರಡಕ್ಕೂ ಒಂದೇ ರೀತಿಯಲ್ಲಿ ಅನ್ವಯವಾಗುತ್ತದೆ. ಯಾವುದೇ ತಾರತಮ್ಯ ಇರುವುದಿಲ್ಲ. ಅಲ್ಲದೇ 1-1-1997ರ ನಂತರ ವಿದ್ಯುತ್ ಸಂಪರ್ಕ ಪಡೆಯುವ ಎಲ್ಲಾ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಮೀಟರ್‌ಗಳನ್ನು ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. 10 ಹೆಚ್.ಪಿ.ಗೂ ಮೇಲ್ಪಟ್ಟು ಸಾಮೂಹಿಕ ಏತ ನೀರಾವರಿ ಯೋಜನೆಯಾಗಲೀ ಅಥವಾ ವೈಯಕ್ತಿಕ ನೀರಾವರಿ ಪಂಪುಸೆಟ್ಟೇ ಆಗಲಿ, ಇವೆರಡಕ್ಕೂ ಒಂದೇ

ರೀತಿಯಲ್ಲಿ ವಿದ್ಯುತ್ ದರಗಳನ್ನು ವಿಧಿಸಲಾಗುತ್ತಿದೆ ; ತಾರತಮ್ಯ ಮಾಡುತ್ತಿಲ್ಲ. 10 ಹೆಚ್.ಪಿ.ಗೂ ಸೇರಿದಂತೆ 10 ಹೆಚ್.ಪಿ.ವರೆಗಿನ ಸಾಮೂಹಿಕ ಏತ ನೀರಾವರಿ ಯೋಜನೆಗಳು ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ಒಂದೇ ರೀತಿಯಲ್ಲಿ ವಿದ್ಯುತ್ ದರಗಳನ್ನು ವಿಧಿಸಲಾ ಗುತ್ತಿದ್ದು, ಯಾವುದೇ ರೀತಿಯ ತಾರತಮ್ಯ ಮಾಡುತ್ತಿಲ್ಲ.

ರೇಷ್ಮೆ ಕೈಗಾರಿಕೆಗೆ ಬೆಂಬಲ ಬೆಲೆ

1396 (1589) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಶ್ರೀಎಂ.ಮಹದೇವ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆಯ ಮೌಲ್ಯ ನಿರ್ದಿಷ್ಟ ಪಡಿಸುವ ಹೆಚ್ಚುವರಿ ಅಥವಾ ಇಳಿಸುವಿಕೆಯ ಬಗ್ಗೆ ನಿಲುವು ತೆಗೆದುಕೊಳ್ಳುವ ಅಧಿಕಾರವು ರಾಜ್ಯ ಸರ್ಕಾರಕ್ಕಿಲ್ಲ. ಬದಲಾಗಿ ಕೇಂದ್ರದಿಂದ ನಿಯಂತ್ರಿಸಲ್ಪಡುತ್ತಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರಾಜ್ಯದ ರೇಷ್ಮೆ ಬೇಡಿಕೆಯನ್ನು ಪೂರೈಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ರೇಷ್ಮೆ ಬೆಳೆ ತೆಗೆಯಲು ಅಭಿವೃದ್ಧಿ ಪಡಿಸಲು ಮಾರಾಟ ಮಾಡಲು ಇತ್ತೀಚಿನ ತಾಂತ್ರಿಕ ಮಾಹಿತಿ ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರೇಷ್ಮೆ ಬೆಲೆಯನ್ನು ರಾಜ್ಯ ಸರ್ಕಾರವಾಗಲಿ ಕೇಂದ್ರ ಸರ್ಕಾರವಾಗಲಿ ನಿಗಧಿಗೊಳಿಸುತ್ತಿಲ್ಲ. ರೇಷ್ಮೆಯನ್ನು ಮಾರುಕಟ್ಟೆಯಲ್ಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುತ್ತಿದೆ.

ಆ) ರಾಜ್ಯದ ರೇಷ್ಮೆ ಬೇಡಿಕೆಯನ್ನು ಪೂರೈಸಲು ಉತ್ತಮ ಗುಣ ಮಟ್ಟದ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಹೊಸ ಹೊಸ ಹಿಪ್ಪುನೇರಳೆ ತಳಿಗಳು ಹಾಗೂ ಅನೇಕ ಸಂಕರಣ ತಳಿಗಳನ್ನು ಸಂಶೋಧನಾಲಯಗಳಲ್ಲಿ ಸಂಶೋಧನೆ ನಡೆಸಿ ಹೊರತಂದು, ಕ್ಷೇತ್ರ ಮಟ್ಟದಲ್ಲಿ ಬಿಡುಗಡೆ ಮಾಡಲಾಗಿದೆ. ಇದರಿಂದ ಉತ್ಪಾದನೆಯಾಗುತ್ತಿರುವ ಕಚ್ಚಾ ರೇಷ್ಮೆ ಅಂತರಾಷ್ಟ್ರೀಯ ಮಟ್ಟಕ್ಕೆ ಸರಿಸಮಾನವಾಗಿರುತ್ತದೆ.

ಇ) ರಾಜ್ಯದಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಲು ಆಧುನಿಕ ತಾಂತ್ರಿಕತೆಗಳಾದ ಅಧಿಕ ಇಳುವರಿ ಕೊಡುವ ಹಿಪ್ಪುನೇರಳೆ ತಳಿಗಳ ಅಭಿವೃದ್ಧಿ, ಮಣ್ಣು ಪರೀಕ್ಷೆ, ಜೈವಿಕ ಗೊಬ್ಬರ ಬಳಕೆ, ಹಿಪ್ಪುನೇರಳೆ ವ್ಯವಸಾಯದಲ್ಲಿ ಹನಿ ನೀರಾವರಿ ಪದ್ದತಿ ಬಳಕೆ ವೈಜ್ಞಾನಿಕ ಪದ್ದತಿಯಲ್ಲಿ ರೇಷ್ಮೆ ಹುಳು ಸಾಕಣೆ, ರೋಗ ನಿಯಂತ್ರಣ ಕಾರ್ಯಕ್ರಮ ಹೆಚ್ಚು ಇಳುವರಿ ಕೊಡುವ ದ್ವಿಸಂತತಿ ಸಂಕರಣ ಮೊಟ್ಟೆಗಳನ್ನು ಉತ್ಪಾದಿಸಿ ರೇಷ್ಮೆ ಬೆಳೆಗಾರರಿಗೆ ಈಗಾಗಲೇಬಿಡುಗಡೆ ಮಾಡಲಾಗುತ್ತಿದೆ. ಇದರಿಂದ ಹೆಚ್ಚಿನ ಇಳುವರಿಯನ್ನು ಪಡೆಯುವುದರ ಜೊತೆಗೆರೆಂಡಿಟ್ಟಾವನ್ನು ತಗ್ಗಿಸುವುದು ಸಹ ಒಂದು ಮುಖ್ಯವಾದ ಅಂಶವಾಗಿದೆ ಪ್ರತ್ಯೇಕ ಹುಳು ಸಾಕಣೆ ಮನೆ ನಿರ್ಮಿಸಲು ರೈತರಿಗೆ ಉತ್ತೇಜನ ನೀಡುವುದು ಮುಂತಾದ ಕಾರ್ಯಕ್ರಮಗಳಲ್ಲದೆ ಗೂಡಿನ ನಂತರದ ಚಟುವಟಿಕೆಗಳಾದ ನೀರಿನ ಪರೀಕ್ಷೆ, ಮೆದು ನೀರಿನ ಸರಬರಾಜು, ಬಿಸಿ ಗಾಳಿಯ ಮೂಲಕ ಗೂಡುಗಳನ್ನು ಹಬೆಗೆ ಒಳಪಡಿಸಿ ಸಂಸ್ಕರಿಸುವುದು, ರೇಷ್ಮೆ ಪರೀಕ್ಷೆ ಮತ್ತು ಪರಿಷ್ಕರಣೆ, ಗುಣಮಟ್ಟದ ರೇಷ್ಮೆ ಉತ್ಪಾದನೆಗೆ ಮಲ್ಟಿ ಎಂಗ್ ಘಟಕಗಳ ಸ್ಥಾಪನೆ ಇಂಧನ ಉಳಿತಾಯದ ಮಿತವ್ಯಯ ಒಲೆಗಳ ಸ್ಥಾಪನೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.